ತಾರೀಖು 3ನೆ ಏಪ್ರಿಲ್ 1907.

ನಂ. 9179—ಸ್ಯಾನಿಟರಿ 129-06—10, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ಶ್ರೀ ಅಶ್ವತ್ಥನಾರಾಯಣ ಸ್ವಾಮಿಯವರ ರಥೋತ್ಸವ.	ಮಹಿಷಿ ..	ತೀರ್ಥಹಳ್ಳಿ ...	25—4—07	30—4—07
2. ಶ್ರೀ ಹುಚ್ಚರಾಯಸ್ವಾಮಿಯವರ ರಥೋತ್ಸವ.	ಶಿಕಾರಿಪುರ ..	ಶಿಕಾರಿಪುರ ...	27—4—07	3—5—07
3. ಬಸವಣ್ಣದೇವರ ರಥೋತ್ಸವ ...	ಬಸವನಂಬಿಹಳ್ಳಿ ..	ಡಿಟೋ ..	27—4—07	30—4—07
4. ಶ್ರೀ ಹನುಮಂತದೇವರ ರಥೋತ್ಸವ.	ಮಂಚಿ ..	ಸೊರಬ ...	22—4—07	23—4—07
5. ಶ್ರೀ ಆಂಜನೇಯದೇವರ ರಥೋತ್ಸವ.	ಹುರಳಿ	ಡಿಟೋ	28—4—07	

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮತ್ ಮಹಾರಾಜರವರ ಸರ್ಕಾರದವರು ಪ್ರತಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರಿಲ್ 1907.

ನಂ. 9464—ಸ್ಯಾ. 156-06-17, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ.	ಚಿಕ್ಕ ತಿರುಪತಿ	ಮಾಲೂರು ...	20—4—07	29—4—07
2. ಪೀರ್ಲಪ್ಪನ ಜಾತ್ರೆ ..	ವಾನರಾಸಿ ...	ಕೋಲಾರ ...	18—4—07	25—4—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮತ್ ಮಹಾರಾಜರವರ ಸರ್ಕಾರದವರು ಪ್ರತಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರಿಲ್ 1907.

ನಂ. 9466—ಸ್ಯಾ. 170-06-22, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು

ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಶ್ರೀ ಬಿಳಿಗಿರಿರಂಗಸ್ವಾಮಿಯವರ ಜಾತ್ರೆ.	ಬಿಳಿಗಿರಿರಂಗಸ್ವಾಮಿ ಬೆಟ್ಟ.	ಎಳಂದೂರು ...	26—4—07	29—4—07
2. ಕನ್ನಂಬಾಡಿ ಅಮ್ಮನವರ ಜಾತ್ರೆ.	ಕನ್ನಂಬಾಡಿ	ಕೃಷ್ಣರಾಜಪೇಟೆ.	17—4—07	25—4—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರಿಲ್ 1907.

ನಂ. 9468—ಸ್ಯಾನಿಟೆರಿ-166-06—5, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳಿಂದು ಆಗಿಂದಾಗ ಪ್ರಕಟನೆಗಳಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯರಹಿತವಾಗಿದ್ದುದರಿಂದ ಅವೆಲ್ಲಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಮಲ್ಲೇನಹಳ್ಳಿ	... ಶಿವಮೊಗ್ಗ.
ಎಡೆಹಳ್ಳಿ ...	... ಡಿಟೋ
ಕುಂಸಿ ಟೌನ್	... ಕುಂಸಿ ಸಬ್ ತಾಲ್ಲೂಕು.

ತಾರೀಖು 15ನೆ ಏಪ್ರಿಲ್ 1907.

ನಂ. 9578—ಸ್ಯಾನಿಟೆರಿ 21—06-120, ಸನ್ 1907ನೆ ಇಸವಿಯ ಏಪ್ರಿಲ್ 6ನೆ ತಾರೀಖಿನ 394ನೆ ನಂಬರಿನ ಎಂಡಾರ್ಸ್‌ಮೆಂಟಿನೊಡನೆ ತಲುಪಿದ ಮದ್ರಾಸು ಸರ್ಕಾರದವರ ಈ ಕೆಳಗೆ ನಮೂದಿಸುವ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ಬರುವ ಉಚ್ಚಂಗಮ್ಮನ ಜಾತ್ರೆಯ ಕಾಲದಲ್ಲಿ ಬಳ್ಳಾರಿ ಡಿಸ್ಟ್ರಿಕ್ಟ್ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗವೆಂಬ ಸ್ಥಳಕ್ಕೆ ಯಾತ್ರಾರ್ಥಿಗಳನ್ನು ಬಿಟ್ಟರೆ ಸದರಿ ಸ್ಥಳದಲ್ಲಿ ಪ್ಲೇಗು ತಗುಲುವ ಅಪಾಯವಿರುವುದಾಗಿ ಸಭಾ ಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡುಬಂದಿರುವುದರಿಂದ :

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿಗನುಗುಣವಾಗಿ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಸಭಾಸಮೇತರಾದ ಗವರ್ನರವರು 1907ನೆ ಇಸವಿಯ ಏಪ್ರಿಲ್ 8ನೆ ತಾರೀಖಿನ ಲಾಗಾಯ್ತು 18ನೆ ತಾರೀಖಿನ ವರೆಗೆ ಸದರಿ ಜಾತ್ರೆಗೆ ಜನರು ಹೋಗಕೂಡದೆಂದು ನಿಷೇಧಿಸುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರನ್ನೆಲ್ಲಾ ವಾಪಸು ಕಳುಹಿಸಲಾಗುವದು.

2. 1907ನೆ ಇಸವಿಯ ಮಾರ್ಚಿ 21ನೆ ತಾರೀಖಿನ ಮೈಸೂರು ಗೆಜೆಟ್ಟಿನ 1ನೆ ಭಾಗದ 210ನೆ ಪುಟದಲ್ಲಿ ಪ್ರಕಟಿಸಿದ 1907ನೆ ಇಸವಿಯ ಮಾರ್ಚಿ 12ನೆ ತಾರೀಖಿನ 8202—ಸ್ಯಾ. 21—06—2ನೆ ನಂಬರಿನ ಇಸ್ತಿಹಾರ್ನಾಮೆಯು ಅದರ ಆಜ್ಞೆಯಿನಲ್ಲಿ ನಮೂದಿಸಲ್ಪಟ್ಟ ಜಾತ್ರೆಗೆ ಸಂಬಂಧಪಡುವಷ್ಟರಮಟ್ಟಿಗೆ ಇದರಿಂದ ರದ್ದಾಗಿರುತ್ತದೆ.

ತಾರೀಖು 15ನೆ ಏಪ್ರಿಲ್ 1907.

ನಂ. 9581—ಸ್ಯಾನಿಟೆರಿ 21-06-121, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಜಾತ್ರೆಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಶ್ರೀ ದೈವಂಗಲ ಸಂವತ್ಸರ ಜಾತ್ರೆ	ಉದಯವಾರ್ ಗ್ರಾಮ.	ಕಾಸರಗೋಡು.	ದಕ್ಷಿಣ ಕನ್ನಡೀಯ.	2—5—07 (ಉಭಯ ದಿನಗಳೂ ಸೇರಿ)	12—5—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಏಪ್ರಿಲ್ 6ನೆ ಕ್ರಮಕ್ಕುಂ 384ನೆ ಮೆಮೋ ಪ್ರಕಾರ.